

ಅಪ್ಪ ಅಮ್ಮ ತೀರಿಕೊಂಡದ್ದು. ಮತ್ತೆ ಕತ್ತಲ ರಾತ್ರಿಗಳಲ್ಲಿ ಅವಳ ಚಿಕ್ಕಪ್ಪ ಎರಗುವುದನ್ನು ಶುರುವಿಟ್ಟುಕೊಂಡಿದ್ದ. ತನ್ನಲ್ಲಿ ಪ್ರತಿರೋಧಿಸುವ ಸತ್ವವೆ ಇಲ್ಲವೇನೋ ಎಂಬಂತೆ ಬಿದ್ದುಕೊಳ್ಳುತ್ತಲಿದ್ದಳು. ಕತ್ತಲಲ್ಲಿ ನಡೆವ ಎಲ್ಲವಕ್ಕೂ ಸಮಾಧಿ ಕಟ್ಟುವ ಕಲೆ ರಾತ್ರಿಗೆ ಗೊತ್ತಿರುವಂತೆ ಹಗಲಾದೊಡನೆ ಎಲ್ಲವೂ ಸಹಜವೆಂಬಂತೆ ತಮ್ಮ ಪಾಡಿಗೆ ತಾವು ನಡೆದುಕೊಂಡು ಹೋಗುತ್ತಿದ್ದವು. ಹೀಗೇ ಒಂದು ದಿನ ರಂಗಜ್ಜಿಯ ಚಿಕ್ಕಪ್ಪ ಕುಡಿದ ಮತ್ತಿನಲ್ಲಿ ಬಸ್ಸಿನ ಕೆಳಗೆ ಬಿದ್ದು ಇಲ್ಲವಾಗಿದ್ದ. ಅದಾಗಲೆ ಅವನಿಗೂ ಒಬ್ಬಳು ಮಗಳಿದ್ದಳು. ರಂಗಜ್ಜಿಯ ಮಗಳಿಗಿಂತ ಮೂರು ವರ್ಷ ಚಿಕ್ಕವಳು. ರಂಗಜ್ಜಿಯ ಮಗಳು ಏಳನೇ ತರಗತಿ ಪಾಸಾಗಿ ಎಂಟನೇ ತರಗತಿಗೆ ಶ್ರೀನಿವಾಸಪುರದ ಸರ್ಕಾರಿ ಪ್ರೌಢಶಾಲೆಗೆ ಸೇರಿ ಆರು ತಿಂಗಳು ಕಳೆದಿತ್ತು. ಒಂದು ದಿನ ಬ್ಯಾಗನ್ನು ಹೆಗಲಿಗೆ ಇಳಿಬಿಟ್ಟು ಶಾಲೆಗೆ ಹೋದವಳು ಮತ್ತೆ ವಾಪಸ್ಸಾಗಲೇ ಇಲ್ಲ. ಸಂಬಂಧಿಕರು, ಸ್ನೇಹಿತರು, ಪೊಲೀಸರು... ಸುತ್ತಮುತ್ತಲ ಕೆರೆ, ಬಾವಿ, ಹಳ್ಳ, ಪೊದೆ... ಹೀಗೆ ಎಲ್ಲ ಸಾಧ್ಯತೆಗಳನ್ನೂ ಪ್ರಯತ್ನಿಸಿ ಏನೂ ಸುಳಿವು ಸಿಗದೆ ಇನ್ನಷ್ಟು ಗಾಸಿಗೊಂಡು ಮತ್ತೆ ಖಿನ್ನತೆಯ ಗೂಡಿಗೆ ಜಾರಿಕೊಂಡಳು. ಮಗಳ ನೆನಪು, ಅವಳ ಇಲ್ಲದಿರುವಿಕೆ ರಂಗಜ್ಜಿಯನ್ನು ನಿತ್ಯವೂ ಬಾಧಿಸಲು ಶುರುಹಚ್ಚಿಕೊಂಡಿತ್ತು. ಯಾರೊಂದಿಗೂ ಮಾತನಾಡದೆ ಮನೆಯೊಳಗೇ ಮುದುಡಿಕೊಂಡು ಯಾತನೆಯನ್ನು ಮತ್ತಷ್ಟು ಹೇರಿಕೊಳ್ಳುತ್ತಲಿದ್ದಳು. ಹೀಗಿರುವಾಗಲೆ ಚಿಕ್ಕಮ್ಮನು ಮೆದುಳಿನ ಕ್ಯಾನ್ಸರ್‌ಗೆ ತುತ್ತಾಗಿರುವ ವಿಷಯ ರಂಗಜ್ಜಿಯ ಅರಿವಿಗೆ ಬರುವ ಮುಂಚೆಯೆ ತೀರಿಕೊಂಡಿದ್ದಳು. ಆಗಲೆ, ಇರುವ ಏಕೈಕ ಆಸರೆ ಎಂಬಂತೆ ಸುಶೀಲ ತನ್ನ ದೊಡ್ಡಮ್ಮನ ಮಡಿಲಿಗೆ ಬಿದ್ದು, 'ತಾನು ಇಲ್ಲೇ ಇರುವೆ' ಎಂದು ಆತುಕೊಂಡಳು. ರಂಗಜ್ಜಿಯೂ, ಇಲ್ಲದ ತನ್ನ ಮಗಳನ್ನು ಸುಶೀಲಳಲ್ಲಿ ಕಂಡುಕೊಂಡು ಓದಿಸಿ ಬೆಳೆಸಿ ಮದುವೆ ಮಾಡಿ ಅಳಿಯನನ್ನೂ ತನ್ನ ಮನೆಯಲ್ಲೆ ಉಳಿಸಿಕೊಂಡಿದ್ದಳು. ಆದರೆ ಅಳಿಯ, ಚಿಕ್ಕಪ್ಪ, ಗಂಡ ತಿಮ್ಮರಾಯ, ಭಾಸ್ಕರ... ಎಲ್ಲರೂ ಒಂದೇ ರಕ್ತದವರೆ ಎಂದು ಅವಳಿಗೆ ಅನೇಕ ಬಾರಿ ಅನಿಸಿರುವುದುಂಟು. ಈಗಲೂ ಅವಳಿಗೆ ತನ್ನ ಮಗಳು ಯಾವುದೋ ಮೃಗದ ಬೇಟೆಗೆ ಈಡಾಗಿ ಇಲ್ಲವಾಗಿರುವ ಅನುಮಾನ ಬಹಳವಾಗಿ ಕಾಡುವುದುಂಟು. ಮತ್ತು ಒಂದೊಂದು ಬಾರಿ ಅವಳು ಯಾರ ಜೊತೆಗೋ ಓಡಿ ಹೋಗಿ ಬೆಂಗಳೂರಿನಲ್ಲೋ ಅಥವಾ ದೂರದ ಮತ್ತೊಂದು ಪಟ್ಟಣದಲ್ಲೋ